ಯಾವ ನಿರ್ಧಾರಯುತವಾದ ಯಾವ ಗಡಿವಿನ ದಿವಸ ಕೊಟ್ಟಿದ್ದೆವು, ಅದಾದ ನಂತರ ಎರಡು ಬಾರಿ ಆ ಗಡುವನ್ನು ವಿಸ್ತರಿಸಿ ಒಂದು ತಿಂಗಳು ಮುಂದುವರಿಸಿರುವುದು ಇದೆ. ಆದುದರಿಂದ, ಹಣವನ್ನು ಕೊಡುವುದರಲ್ಲಿ ವಿಳಂಬ ಸ್ವಲ್ಪ ಮಟ್ಟಿಗೆ ಆಗಿರಬಹುದು, ಖಂಡಿತವಾಗಿಯೂ ಕೂಡ ಅದನ್ನು ಕೊಡುತ್ತಾರೆ. ತಾವು ಏನು ಉದಾಹರಣೆ ಕೊಟ್ಟಿದ್ದೀರಿ, ಎಪಿಎಂಸಿ ಯಲ್ಲಿ 15 ದಿವಸದೊಳಗೆ ಹಣ ಕೊಡದಿದ್ದರೆ ಶಿಕ್ಷೆಯಾಗುತ್ತದೆಂದು ತಾವು ಏನು ಹೇಳಿದಿರಿ, ತಮಗೆಲ್ಲರಿಗೂ ಗೊತ್ತಿರುವಂತೆ, ಖರೀದಿದಾರರು ಮತ್ತು ದಲ್ಲಾಳಿಗಳು ಅವರೇ ಆಗಿರುವುದರಿಂದ ಒಂದೂವರೆ ಎರಡು ತಿಂಗಳಿನಿಂದ ರೈತರಿಗೆ ಇನ್ನು ಹಣ ಕೊಡದಿರುವ ಪ್ರಕರಣಗಳು ಇವೆ. ಅದರ ಬಗ್ಗೆ ಚರ್ಚೆಗೆ ಎಪಿಎಂಸಿ ಮಂತ್ರಿಗಳು ಕರೆದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಹಣ ಕೊಡದೇ ಸುಮಾರು 4–6 ತಿಂಗಳಾಗಿವೆ.

ಶ್ರೀ ಎಂ.ಪಿ. ಪ್ರಕಾಶ್ : ಇಲ್ಲ, ಏಕೆಂದರೆ, ನಿರೀಕ್ಷೆ ಮೀರಿ ಆವರ್ತನಿಧಿಯಲ್ಲಿ ಹಣವನ್ನು ಬಜೆಟ್‌ನಲ್ಲಿ ಕೊಟ್ಟಿರುವುದರಿಂದ, ಖಂಡಿತವಾಗಿ ಅದರ ಹಣ ಕೊಡುವ ಕೆಲಸ ಮಾಡುತ್ತೇವೆ.

ವಿಷಯ : ಪಿಡಬ್ಲ್ಯೂಡಿ ರಸ್ತೆಗಳಲ್ಲಿರುವ ಎಲೆಕ್ಟ್ರಿಕಲ್ ಪೋಲ್‌ಗಳನ್ನು ಶಿಫ್ಟ್ ಮಾಡುವ ಬಗ್ಗೆ.

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಷನ್ ಏನೆಂದರೆ, ನಾವು ನೋಟೀಸ್ ತೆಗೆದುಕೊಂಡು ಬರುತ್ತೇವೆ. ಪಿಡಬ್ಲ್ಯೂಡಿ ರಸ್ತೆಗಳ ಕಡೆ ಎಲೆಕ್ಟ್ರಿಕಲ್ ಪೋಲ್ ಇವೆ, ಆ ಎಲೆಕ್ಟ್ರಿಕಲ್ ಪೋಲ್ ಶಿಫ್ಟ್ ಮಾಡಬೇಕೆಂದರೆ ಪಿಡಬ್ಲ್ಯೂಡಿ ಯವರು ಹಣ ಕಟ್ಟಬೇಕೆಂದು ಅವರು ಹೇಳುತ್ತಾರೆ, ಕೆಇಬಿ ಯವರು ಅವರು ಹಣ ಕಟ್ಟಿದರೆ ನಾವು ತೆಗೆಯುತ್ತೇವೆಂದು ಹೇಳುತ್ತಾರೆ, ಅದಕ್ಕೆ ಪಿಡಬ್ಲ್ಯೂಡಿ ಯವರು ಹಣ ಕಟ್ಟುವ ಅವಶ್ಯಕತೆ ಇಲ್ಲ. ಎರಡು ಸರ್ಕಾರದ್ದು ತಾನೇ ನಾವು ಈಗಲೇ ಮೀಟಿಂಗ್ ಮಾಡುತ್ತೇವೆಂದು ಹೇಳಿ ಅವರು ಹಣ ಕಟ್ಟುವುದಿಲ್ಲ. ಇವರು ಹಣ ಕಟ್ಟುವವರೆವಿಗೂ ಅವರು ತೆಗೆಯುವುದಿಲ್ಲ ಹೀಗಾಗಿ ಕಂಟ್ರಾಕ್ಟರ್ ಸುಮ್ಮನೆ ಕುಳಿತಿದ್ದಾರೆ. ಅದರ ಬಗ್ಗೆ ಏನಾದರೊಂದು ವ್ಯವಸ್ಥೆ ಮಾಡಿ ಕೊಟ್ಟರೆ ಒಳ್ಳೆಯದು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇಲಾಖೆಗಳಲ್ಲಿ ಈ ತರಹದ ನಡವಳಿಕೆಗಳು ಇರುತ್ತವೆ. ನಾವು ನೇರವಾಗಿ ದುಡ್ಡು ಕೊಡಲಿ ಎಂದು ಹೇಳಿದರೂ ಕೂಡ ಅಂತರ ಇಲಾಖೆಯಲ್ಲಿ ಆ ಪುಸ್ತಕದಲ್ಲಿ ಲೆಕ್ಕಾಚಾರ ಮಾಡಬೇಕಾಗುತ್ತದೆ, ಆ ದೃಷ್ಟಿಯಿಂದ ಆ ವಿಚಾರದಲ್ಲಿ ಲೋಕೋಪಯೋಗಿ ಇಲಾಖೆ ಸ್ವಲ್ಪ ಹಣವನ್ನು ತೆಗೆದು ಇಡಬೇಕಾಗುತ್ತದೆ. ರಸ್ತೆ ಅಗಲೀಕರಣ ಮಾಡುವ ಸಂದರ್ಭ ಅಥವಾ ಅದನ್ನು ಸ್ಥಳಾಂತರ ಮಾಡಬೇಕು ಎನ್ನುವ ಸಂದರ್ಭದಲ್ಲೂ ಕೂಡ ಹಣವನ್ನು ಕಟ್ಟಬೇಕಾಗುತ್ತದೆ. ಹಾಗೇನಾದರೂ ತಮ್ಮ ಹತ್ತಿರ ನಿರ್ದಿಷ್ಟ ಪ್ರಕರಣಗಳು ಇದ್ದರೆ ಅದನ್ನು ಖಂಡಿತವಾಗಿಯೂ ಮಾನ್ಯ ಮಂತ್ರಿಗಳಿಗೆ ತಿಳಿಸುತ್ತೇನೆ, ತಾವು ದಯಮಾಡಿ ಅದನ್ನು ಕೊಡಿ.

ವಿಷಯ : ಅಂಗವಿಕಲರಿಗೆ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆಯ ಮೂಲಕ ಉಚಿತವಾಗಿ ಪಾಸ್ ನೀಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೆ, ಅಂಗವಿಕಲರಿಗೆ ವಿಶೇಷವಾದ ಸ್ಥಾನಮಾನ ಗೌರವ ಕೊಡಬೇಕೆಂದು ಕೇಂದ್ರ ಸರ್ಕಾರ ಅನೇಕ ಕಡೆಗಳಲ್ಲಿ ರಾಜ್ಯ ಸರ್ಕಾರಗಳಿಗೆ ಹೇಳಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಸಂಸ್ಥೆಯ ಮೂಲಕ ಉಚಿತವಾಗಿ ಬಹಳ ಹಿಂದೆ ಪಾಸ್ ಕೊಟ್ಟಿದ್ದರು. ಮಾನ್ಯ ಪ್ರಕಾಶ್‌ರವರೇ ತಾವು ಇದನ್ನು ಮಾಡಿದ್ದು. ಆಗ ಅವರು ಇಡೀ ರಾಜ್ಯಾದ್ಯಂತ ಉಚಿತವಾಗಿ ಓಡಾಡುತ್ತಿದ್ದರು. ಆದರೆ ಈಗ ವರ್ಷಕ್ಕೆ 250 ರೂಪಾಯಿ ಕಟ್ಟಬೇಕು ಹಾಗೂ 100 ಕಿಲೋ ಮೀಟರ್ ಮಾತ್ರ ಓಡಾಡಬೇಕು ಎಂದು ನಿಗದಿಪಡಿಸಿದೆ. ಇದನ್ನು ತಾವು ತೆಗೆದು ಹಾಕಿ ಉಚಿತವಾಗಿ ಇಡೀ ರಾಜ್ಯಾದ್ಯಂತ ಓಡಾಡುವಂತೆ ಮಾಡಬೇಕು ಹಾಗೂ ಆ 100 ಕಿಲೋ ಮೀಟರ್ ಏನು ಇದೆ ಅದನ್ನು ತೆಗೆದು ಹಾಕತಕ್ಕಂಥದ್ದು ಹಾಗೂ 250 ರೂಪಾಯಿ ದುಡ್ಡು ಕಟ್ಟುವುದನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕು. ಇದಕ್ಕೆಲ್ಲ ವರ್ಷಕ್ಕೆ ಒಂದು ಕೋಟಿ ರೂಪಾಯಿ ಲಾಭ ಬರುವುದಿಲ್ಲ. ಅದಕ್ಕಾಗಿ ಈ ದೃಷ್ಟಿಯಿಂದ ತಾವು ಏನು ಉದಾತ್ತವಾದ ಒಂದು ಉದ್ದೇಶ ಇಟ್ಟುಕೊಂಡಿದಿರಿ ಅದಕ್ಕೆ ಭಂಗ ಬರುತ್ತದೆ, ಆದುದರಿಂದ ದಯಮಾಡಿ ಎಲ್ಲಾ ಕಡೆ ಉಚಿತವಾಗಿ ಓಡಾಡುವಂಥದ್ದು ಹಾಗೂ 250 ರೂಪಾಯಿ ಕಟ್ಟುವ ವಿಚಾರದ ಬಗ್ಗೆ ಅದನ್ನು ರದ್ದು ಮಾಡುವ ಬಗ್ಗೆ ತಾವು ತೀರ್ಮಾನ ತೆಗೆದುಕೊಳ್ಳಬೇಕು.